ಹೊಟ್ಟೆ ತುಂಬಾ ತಿನ್ನೋಣ. ಅದು ಮಗನಿಗೂ ಇಷ್ಟವಾಗುತ್ತೆ ನೋಡ್ತಾ ಇರು' ಎಂದ ಸಂಭ್ರಮದಿಂದ.

ನಳಿನಿ ಯೋಚಿಸುತ್ತ, 'ಏನಂದ್ರಿ ನೀವು? ಕಸೂತಿನಾ? ಕಸೂತಿ ಬಟ್ಟೆ ಮೇಲೆ ಹಾಕ್ತಾರಲ್ಲ! ಆ ಹೆಸರಿನ ತಿನಿಸು ಕೂಡ ಇದೆಯಾ? ಇಷ್ಟರವರೆಗೂ ನಾ ಕೇಳಿಯೇ ಇಲ್ಲ, ನೋಡಲಿಕ್ಕೆ ಹೇಗಿದೆ ಅದು?' ಎಂದಳು ಆಶ್ಚರ್ಯದಿಂದ.

'ಏನೇ! ಅಷ್ಟು ಗೊತ್ತಿಲ್ವಾ ನಿನಗೆ? ರೌಂಡ್ ರೌಂಡ್ ಆಗಿ ದಪ್ಪವಾಗಿ ಪೂರಿ ತರ ಉಬ್ಬಿರುತ್ತೆ. ಅದು ಏನು, ಎತ್ತ ಅಂತ ಕೇಳದೆ ಸುಮ್ಮನೆ ಮಾಡಿಕೊಡು ಅಷ್ಟೇ' ಎಂದು ರೇಗಿದ.

'ಅದೇನು ಸಿಹಿಯೋ? ಖಾರವೋ? ಏನೆಂದು ತಿಳಿಯದೆ ಮಾಡು ಅಂತ ಅಂದ್ರೆ, ನಾನು ಹೇಗೆ ಮಾಡಲಿ? ಬರುವಾಗ ಹೆಸರನೇನಾದ್ರೂ ಮರೆತಿರಾ ಹೇಗೆ?' ಎಂದಳು ಮುನಿಸಿನಿಂದ. ಅಷ್ಟರಲ್ಲಿ ಅಲ್ಲೇ ನಿಂತಿದ್ದ ಮಗರಾಯ 'ಹ್ಹಹ್ಹಹ್ಹ... ಅಮ್ಮ ಅಪ್ಪನಿಗೆ ತಿನಿಸಿನ ಹೆಸರು ನೆನಪಿಲ್ಲ, ಈಗ ಏನೇನೋ ಹೇಳ್ತಾ ಇದ್ದಾರೆ' ಎಂದ.

'ನಾನು ಸರಿಯಾಗಿ ಹೇಳುತ್ತಿರುವೆ. ನಿನ್ನ ಅಮ್ಮನಿಗೆ ಅಡುಗೆ ಜ್ಞಾನ ಇಲ್ಲ, ಅದಕ್ಕೆ ಅರ್ಥವಾಗ್ತಿಲ್ಲ! ಏನಂದೆ ಮಗನೇ, ನನಗೆ ಮರೆವು ಅಂತ ಗೇಲಿ ಮಾಡ್ತೀಯಾ? ನಿನ್ನ...' ಎಂದವನೇ ಸಿಟ್ಟಿನಿಂದ ಎರಡು ಬಿಗಿದ.



'ಅಮ್ಮ...' ಎಂದು ಕಿರುಚಿದ ಮಗನನ್ನು ಅಪ್ಪಿ ಹಿಡಿದು, 'ಅಯ್ಯೋ ಹೊಡೀಬೇಡಿ ಮಗುವನ್ನು. ಯಾರನ್ನಾದರೂ ಕೇಳಿ ಮಾಡಿಕೊಡುತ್ತೇನೆ ಆಯ್ತಾ' ಎಂದು ಗೊಗರೆದಳು ನಳಿನಿ. ಸಿಟ್ಟಿನಿಂದ ಬಿರಬಿರನೆ ಹೊರಟು ಹೋದ ಶಂಕರ.

ಅಳುತ್ತಿದ್ದ ಮಗನನ್ನು ಹೊರಗೆ ಹೋಗಿ ಸಮಾಧಾನಿಸುತ್ತಾ, ಗಂಡ ಹೇಳಿದ ತಿನಿಸು ಯಾವುದಿರಬಹುದೆಂದು ಯೋಚಿಸುತ್ತಾ, ಬಾವಿ ದಂಡೆ ಮೇಲೆ ಕುಳಿತಿದ್ದ ನಳಿನಿಯನ್ನು, ಪಕ್ಕದ ಮನೆ ರೂಪಾ ಮಾತನಾಡಿಸಲು ಬಂದಳು. ಅಳುತ್ತಿದ್ದ ಹುಡುಗನನ್ನು ನೋಡಿ ಗಾಬರಿಯಿಂದ, "ಇದೇನೇ ನಳಿನಿ! ನಿನ್ನ ಮಗನ ಕೆನ್ನೆ ಒಳ್ಳೆ ರಾಜಸ್ಥಾನಿ 'ಕಚೋರಿ' ತರಹ ಉಬ್ಬಿದೆಯಲ್ಲಾ! ಏನಾಯ್ತು? ಇವತ್ತು ಯಾವ ವಿಷಯಕ್ಕೆ ರಂಪಾಟ ನಿಮ್ಮ ಯಜಮಾನರದ್ದು? ಯಾವಾಗಲೂ ಏನಾದರೂ ಒಂದು ರಗಳೆ ತೆಗೆಯದಿದ್ದರೆ ತಿಂದನ್ನ ಕರಗಲ್ಲ ಅನಿಸುತ್ತೆ ಆ ಮನುಷ್ಯನಿಗೆ" ಎಂದಳು ಕನಿಕರದಿಂದ.

ಅದೆಲ್ಲಿದ್ದನೋ ಪುಣ್ಯಾತ್ಮ ಶಂಕರ! ಥಟಗನೆ ಪ್ರತ್ಯಕ್ಷನಾಗಿ, ಏನೋ ಹೊಳೆದಂತೆ ಉದ್ವೇಗದಿಂದ, "ನಳಿನಿ ನಳಿನಿ... ಅದೇ ಅದೇ... ರೂಪಾ ಈಗ ಹೇಳಿದ್ಲಲ್ಲ, 'ಕಚೋರಿ' ಅಂತ. ನಾನು ಹೇಳಿದ್ದೂ ಅದೇ ತಿನಿಸು! ಅವಳ ಹತ್ತಿರ ತಿಳಿದುಕೊಂಡು ಮಾಡೇ. ಪ್ಲೀಸ್!" ಮಾತಿನಲ್ಲಿ ಮಧುರತೆ ಮೂಡಿತ್ತು.

'ನಿಮ್ಮ ತಿನ್ನೋ ಚಪಲದೊಳಗೆ ನಾನು ಸೋತು ಹೋದೆ ಮಾರ್ರೈರೆ. ಆಗಲೇ ಸರಿಯಾದ ಹೆಸರು ಹೇಳಿದ್ದರೆ, ಈ ಹೊಡೆತ ಎಲ್ಲ ಬೇಕಿತ್ತಾ? ಮಗನ ಮುಖ ನೋಡಿ ಹೇಗಾಗಿದೆ. ನಿಮ್ಮ ಮರೆಗುಳಿತನದಿಂದ ಮನೆಯಲ್ಲಾ ರಾಮಾಯಣ' ಎಂದಳು ನಳಿನಿ ಸಿಟ್ಟಿನಿಂದ.



'ತಪ್ಪಾಯ್ತು ಕಣೆ, ಸಾರೀ ಕಣೋ ಮಗನೇ, ಇನ್ನು ಮುಂದೆ ಹೀಗೆಲ್ಲಾ ಹೊಡೆಯಲ್ಲ, ನನ್ನದೊಂದು ಹಾಳು ಮರೆವು ಏನ್ಮಾಡುದು ಹೇಳು. ಇದೊಂದ್ ಸಾರಿ ಕ್ಷಮಿಸಿ ಬಿಡು' ಎಂದ ಪಶ್ಚಾತ್ತಾಪದಿಂದ ಶಂಕರ. 'ಆ ತಿನಿಸಿಗೆ ಏನು ಬೇಕಂತ ಬರೆದುಕೊಡು ತರ್ತೀನಿ!' ಎಂದು ಹೆಂಡತಿ ಮಗನನ್ನು ರಮಿಸುತ್ತಾ ಒಳಗೆ ಕರೆದುಕೊಂಡು ಹೋದನು. ಇವರ ಮನೆಯಲ್ಲಿ ಏನು ನಡೆಯುತ್ತಾ ಇದೆ ಎಂದು ಅರ್ಥವಾಗದ ರೂಪಾ ಬಾಯಿ ಬಿಟ್ಟು ನೋಡುತ್ತಾ ನಿಂತಳು!

ಪ್ರತಿಕ್ರಿಯಿಸಿ: feedback@sudha.co.in


1972 50 Years Golden Jubilee

**ರಾಜೇಂದ್ರ ಆಯುರ್ವೇದಿಕ್ ಕ್ಲಿನಿಕ್**



**ಎಲ್ಲಾ ವಿಧದ ಕ್ಯಾನ್ಸರ್, ಪಾರ್ಶ್ವವಾಯು, ಸಂಧಿವಾತ, ಚರ್ಮ ರೋಗಗಳು, ಸೈನಸ್, ಅಸ್ತಮಾ, ಅಪಸ್ಮಾರ, ಖಿನ್ನತೆ, ಭಯ, ಆತಂಕ, ನಡುಕ ಇತ್ಯಾದಿ ಸೇರಿದಂತೆ ದೀರ್ಘಕಾಲದ ಕಾಯಿಲೆಗಳಿಗೆ ವಿಶೇಷ ವೈದ್ಯಕೀಯ ಚಿಕಿತ್ಸೆ.**

ಮಾನವರಲ್ಲಿ ರೋಗಗಳು ನಾಲ್ಕು ವಿಧದ ಕಾರಣಗಳಿಂದ ಉಂಟಾಗುತ್ತದೆ. ತಪ್ಪುಗಳು – ಅಪಘಾತಗಳು ವಂಶಪಾರಂಪರ್ಯ ಕಾರಣಗಳು ಹಿಂದಿನ ಜನ್ಮ ಕರ್ಮಗಳಿಂದ ಮನುಷ್ಯರು ಪ್ರಭಾವಿತರಾಗಿದ್ದಾರೆ.

**ವಿಜ್ಞಾನ ಆಕಾಶದೆತ್ತರಕ್ಕೆ ಬೆಳೆದು ಜಗತ್ತು ದಿನದಿಂದ ದಿನಕ್ಕೆ ಆಧುನಿಕವಾಗುತ್ತಿದ್ದರೂ ಮೇಲಿನ ಪ್ರಭಾವದ ಚಕ್ರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ, ಅಪಘಾತಗಳು ಮತ್ತು ಅನುವಂಶಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ವಿಜ್ಞಾನವು ನಮಗೆ ಉಪಯುಕ್ತವಾಗಿದೆ. ಆದರೆ ಕರ್ಮ ರೋಗಗಳ ಸಂದರ್ಭದಲ್ಲಿ ತಪ್ಪುಗಳು – ಅಪಘಾತಗಳು, ವಿಜ್ಞಾನವು ಖಂಡಿತವಾಗಿಯೂ ಉಪಯುಕ್ತವಲ್ಲ. ಏಕೆಂದರೆ ಕರ್ಮ ರೋಗಗಳು ಬರೀ ಔಷಧದಿಂದ ಗುಣವಾಗುವಂಥದ್ದಲ್ಲ.**

ಭಾರತೀಯ ವೈದ್ಯಕೀಯ ಪದ್ಧತಿಯು ಕರ್ಮ ರೋಗಗಳ ಬಗ್ಗೆ ವಿವರವಾಗಿ ವಿವರಿಸಿದೆ. ಕೆಲವರಿಗೆ ವಿನಾಕಾರಣ ಕಾಯಿಲೆಗಳು ಬರುತ್ತವೆ. ಕೆಲವರಿಗೆ ಎಷ್ಟೇ ಚಿಕಿತ್ಸೆ ನೀಡಿದರೂ ಗುಣವಾಗುವುದಿಲ್ಲ. ಕೆಲವರಿಗೆ ಸೂಕ್ತವಲ್ಲದ ಕಾಯಿಲೆಗಳು ಬರುತ್ತವೆ. ಇದರ ಬಗ್ಗೆ ದೀರ್ಘ ವಿವರಣೆಗಳನ್ನು ನೀಡಬಹುದು. ಡಾ.ಕೆ.ವಿ.ರಾಜೇಂದ್ರನ್ RAMP, DNYS, M.A., ಕಳೆದ 50 ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ದೇವರು ಮತ್ತು ಗುರುಗಳ ಕೃಪೆಯಿಂದ ಇಂತಹ ಕ್ಲಿಷ್ಟಕರ ಮತ್ತು ಸಂಕೀರ್ಣ ಕಾಯಿಲೆಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡುತ್ತಿದ್ದಾರೆ.

**ಸರಿಯಾದ ಚಿಕಿತ್ಸೆ ದೊರೆಯದೆ ಜಿಗುಪ್ಸೆಗೊಂಡವರು ಕೂಡ ಒಂದು ಭಾರಿ ಭೇಟಿಯಾಗಿ, ಶಾಶ್ವತ ಪರಿಹಾರ ಪಡೆಯಿರಿ.**

**ನಡೆಯಲು ತೊಂದರೆಯಿರುವ ರೋಗಿಗಳಿಗೆ ಅವರವರ ಮನೆಗೆ ಬಂದು ಚಿಕಿತ್ಸೆ ಕೊಡುತ್ತೇವೆ.**

**ಬೆಂಗಳೂರಿನಲ್ಲಿ ಪ್ರತಿ ತಿಂಗಳ 6 ರಿಂದ 25 ರವರೆಗೆ ನೀವು ವೈದ್ಯರನ್ನು ವೈಯಕ್ತಿಕವಾಗಿ ಭೇಟಿ ಮಾಡಬಹುದು.**

ನಂ.4, 6ನೇ ಕ್ರಾಸ್, ಎಂ.ಎಸ್.ರಾಮಯ್ಯ ರಸ್ತೆ (ಎಚ್‌ಎಂಟಿ ರಸ್ತೆ),
ಅಯ್ಯಪ್ಪ ದೇವಸ್ಥಾನದ ಬಸ್ ನಿಲ್ದಾಣ, ಎಸ್ಸಾರ್ ಪೆಟ್ರೋಲ್ ಬಂಕ್ ಎದುರು,
ಸುಬೇದಾರಪಾಳ್ಯ, ಯಶವಂತಪುರ, ಬೆಂಗಳೂರು–22,

**ಮೊ : 9344455511**